## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 69/2024

**ಸಾಕ್ಷಿಯನ್ನು ದಿಃ 03.02.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಚೇತನ್ | ಸಿಡಬ್ಲ್ಯೂಃ 8 | ಪಿಡಬ್ಲ್ಯೂಃ 7 |
| ತಂದೆಯ ಹೆಸರು | ನಾಗರಾಜು | | |
| ವಯಸ್ಸು | 35 ವರ್ಷ | | |
| ಕೆಲಸ | ವೈನ್ ಶಾಪ್ ಕೆಲಸ | | |
| ವಾಸಸ್ಥಳ | ಮಾರುತಿ ಬಡಾವಣೆ,<br>ಹುಣಸೂರು | | |

### ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನನಗೆ ಚಾಸಾ-1, 4 ರಿಂದ 7 ಗೊತ್ತು. ಆರೋಪಿರು ಗೊತ್ತು. ದಿಃ23.11.2023 ರಂದು ಚಾಸಾ-1 ರವರು ಚಾಸಾ-6 ಮತ್ತು 7 ರವರನ್ನು ಚಾಸಾ-1ರವರ ಜಮೀನಿಗೆ ಕಳುಹಿಸಿದ್ದರು. ಅಲ್ಲಿ 7-8 ಜನ ಆರೋಪಿತರು ಜಗಳ ಮಾಡುತ್ತಿದ್ದರು. ಹೊಲ ಉಳಲು ಬಿಡದೇ ಗಲಾಟೆ ಮಾಡುತ್ತಿದ್ದರು. ಚಾಸಾ-1 ರವರೊಂದಿಗೆ ಗಲಾಟೆ ಮಾಡಿ ಅವರಿಗೆ ಬೈದರು. ಚಾಸಾ-1 ರವರ ಪತ್ನಿಯಾದ ಚಾಸಾ-4 ರವರಿಗೂ ಸಹ ಕೆಟ್ಟದಾಗಿ ಬೈದರು. ಮತ್ತೇ ಜಮೀನಿನ ಹತ್ತಿರ ಬಂದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ಜಮೀನು ನಮ್ಮದು ಜಮೀನಿನ ಹತ್ತಿರ ಬಂದರೆ ಬಿಡುವುದಿಲ್ಲ ಎಂದು ಹೇಳಿದರು. ನಾನು ಜೊತೆಯಲ್ಲಿಯೇ ಇದ್ದೆ. ಗಲಾಟೆ ಬೇಡ ಎಂದು ದೂರನ್ನು ಕೊಟ್ಟೆ. ಟ್ರ್ಯಾಕ್ಟರ್ ನಿಂದ ಜಮೀನು ಉಳಲು ಹೋದಾಗ ಆರೋಪಿತರು ಟ್ರ್ಯಾಕ್ಟರ್ ನ ಕೆಳಗೆ ಮಲಗಿ ತಡೆ ಮಾಡಿದರು. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>**

ಗಲಾಟೆ ದಿಃ21.11.2023 ರಂದು ಆಗಿದೆ ಎಂದರೆ ಸರಿ. ನಾನು, ಚಾಸಾ-1, ಚಾಸಾ-4, ಚಾಸಾ-5 ರಿಂದ 7 ರವರು ಜಮೀನಿನಲ್ಲಿ ಉಳಲು ಹೋದಾಗ ಬೆಳಿಗ್ಗೆ 10 ಗಂಟೆಗೆ ಆರೋಪಿತರಾದ ಚಂದ್ರಶೇಖರ್, ಈರಣ್ಣೇಗೌಡ, ಕೆಂಡೇಗೌಡ, ಸಾಕಮ್ಮ, ಸಣ್ಣಮ್ಮ, ಮಲ್ಲಮ್ಮ, ಶಿವಮ್ಮ ಮತ್ತು ಅಭಿ ಅಕ್ರಮ ಗುಂಪುಕಟ್ಟಿಕೊಂಡು ಬಂದರು ಎಂದರೆ ಸರಿ. ಚಾಸಾ-1 ರವರ ಜಮೀನನ್ನು ಟ್ರ್ಯಾಕ್ಟರ್ ನಲ್ಲಿ ಉಳುಮೆ ಮಾಡುತ್ತಿದ್ದಾಗ ಆರೋಪಿತರು ಉಳುಮೆ ಮಾಡಲು ಬಿಡದೇ ಅವಾಚ್ಯ ಶಬ್ದಗಳಿಂದ ಅಂದರೆ ಸೂಳೆ ಮಗನೆ, ಬೋಳಿ ಮಗನೇ ಎಂದು ಚಾಸಾ-1 ರವರಿಗೆ ಬೈದರು ಎಂದರೆಸರಿ. ಎಲ್ಲಾ ಆರೋಪಿತರು ಚಾಸಾ-4 ರವರಿಗೆ ರಂಡೆ, ಮುಂಡೆ ಎಂದು ಕೆಟ್ಟ ಶಬ್ದಗಳಿಂದ ಬೈದರು ಎಂದರೆ ಸರಿ. ಚಾಸಾ-1 ಮತ್ತು 4 ರವರನ್ನು ಅಡ್ಡಗಟ್ಟಿತಡೆದು ತಳ್ಳಿಕೆಳಗೆ ಬೀಳಿಸಿದರು ಎಂದರೆ ಸರಿ.

**<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ. RKS ವಕೀಲರಿಂದಃ**

ನನಗೆ ಚಾಸಾ-1 ರವರು 12-13 ವರ್ಷಗಳಿಂದ ಪರಿಚಯ. 2022ರಲ್ಲಿ ಚಾಸಾ-1 ರವರು ಜಮೀನನ್ನು ಖರೀದಿಸಿದರು. ಆ ಸಮಯದಲ್ಲಿ ನಾನು ಚಾಸಾ-1 ರವರ ಜೊತೆ ಹೋಗಿದ್ದೆ. ಆ ಸಮಯದಲ್ಲಿ ಜಮೀನಿನ ಸ್ವಾಧೀನದಲ್ಲಿ ರತ್ನಕಾಳಮ್ಮ ಎಂಬುವವರು ಸ್ವಾಧೀನ ಇದ್ದರು. ರತ್ನಕಾಳಮ್ಮರವರು ಅದರ ಸ್ವಾಧೀನ ಇದ್ದಾರೆ ಎಂದು ಅವರಿಂದಲೇ ದೃಢಪಡಿಸಿಕೊಂಡೆವು. ರತ್ನಕಾಳಮ್ಮರವರು ಸ್ವಾಧೀನ ಇದ್ದಾರೆ ಎಂದು ನಾವು ಕಣ್ಣಾರೆ ನೋಡಿಲ್ಲ ಎಂದರೆ ನೋಡಿದ್ದೇವೆ. 2023ರಲ್ಲಿ ಮೊದಲಬಾರಿಗೆ ಚಾಸಾ-1 ರವರು ಜಮೀನಿನಲ್ಲಿ ಉಳುಮೆ ಮಾಡಲು ಹೋಗಿದ್ದರು. ನಾನು ಜಮೀನಿಗೆ 10 ಗಂಟೆಗೆ ಹೋಗಿದ್ದೆ. ಆ ಸಮಯದಲ್ಲಿ ಟ್ರ್ಯಾಕ್ಟರ್ ಸರ್ವೇ ನಂಬರ್ 67ರಲ್ಲಿ ಉಳುಮೆ ಮಾಡುತಿತ್ತು. ಟ್ರ್ಯಾಕ್ಟರ್ ಉಳುಮೆ ಮಾಡುತ್ತಿದ್ದ ಜಮೀನಿನ ಚಕ್ಕುಬಂದಿ ಗೊತ್ತಿಲ್ಲ. ಟ್ರ್ಯಾಕ್ಟರ್ ಹೆಸರು ಗೊತ್ತಿಲ್ಲ. ಆದರೆ ಅದರ ಚಾಲಕನ ಹೆಸರು ಹರೀಶ. ಸರ್ವೇ ನಂಬರ್ 67ನ್ನು ಚಾಸಾ-1 ರವರು ಖರೀದಿಸಿದ್ದರು. ಸರ್ವೇ ನಂಬರ್ 67 ರಲ್ಲಿ ಯಾವ ಪೋಡನ್ನು ಚಾಸಾ-1 ಖರೀದಿಸಿದ್ದರು ಎಂದರೆ ಗೊತ್ತಿಲ್ಲ. ಚಾಸಾ-1 ರವರು ಖರೀದಿಸಿದ ಜಮೀನಿನ ದಕ್ಷಿಣ, ಪೂರ್ವ ರಸ್ತೆ, ಉತ್ತರಕ್ಕೆ ಚಂದ್ರರವರ ಜಮೀನು, ಪಶ್ಚಿಮಕ್ಕೆ ಗೊತ್ತಿಲ್ಲ. ಸರ್ವೇ ನಂಬರ್

67/2ರಲ್ಲಿ ಗಲಾಟೆಯಾಗಿದೆ. ಸರ್ವೇ ನಂಬರ್ 67ರ ಜಮೀನು ಅಲ್ಲಿ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ಮತ್ತು 4ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಸಿವಿಲ್ ಪ್ರಕರಣಕ್ಕೆ ಸಹಾಯವಾಗಲೀ ಎಂದು ನಾನು ಮತ್ತು ಚಾಸಾ-1 ರವರು ಶಾಮಿಲಾಗಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.